# ನಗರಸಭಾ ಕಾರ್ಯಾಲಯ, ಕಾರವಾರ

ನಂ:ನಸಕಾ/ಕಾವಿ/CMSMTDP/ಟೆಂಡರು 1016/2009-10 ದಿನಾಂಕ:-17-02-2010

## ಟೆಂಡರ ಪ್ರಕಟಣೆ(ಎರಡು ಲಕೋಟೆ ಪದ್ದತಿ)

ಮಾನ್ಯ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಕಾರವಾರ ನಗರಸಭೆಗೆ ಬಿಡುಗಡೆಯಾಗಲಿರುವ ಅನುದಾನದಲ್ಲಿ ಒಟ್ಟು 3 ಸಂಖ್ಯೆ ರೂ. 265.00 ಲಕ್ಷ ಮೊತ್ತದ ಕಾಮಗಾರಿಗಳನ್ನು ನಿರ್ವಹಿಸುವ ಕುರಿತು ನಗರಸಭೆಯಲ್ಲಿ ಪ್ರಸ್ತುತ ಸಾಲಿಗೆ ನೋಂದಾಯಿಸಿದ ಒಂದನೇ ದರ್ಜೆ ಸಿವಿಲ್ ಗುತ್ತಿಗೆದಾರರಿಂದ ಐಟಂರೇಟ ಟೆಂಡರುಗಳನ್ನು **KW-3 (TWO COVER SYSTEM)** ಮಾದರಿ ಟೆಂಡರು ದಾಖಲೆಗಳ ಶರತ್ತಿಗೆ ಒಳಪಟ್ಟು ಕರೆಯಲಾಗಿದೆ. ಆಸಕ್ತ ಗುತ್ತಿಗೆದಾರರು ದಿನಾಂಕ: 22-03-2010 ರಂದು ಸಾಯಂಕಾಲ 4.30 ಗಂಟೆಯ ಒಳಗೆ ಎರಡು ಲಕೋಟೆ ಪದ್ದತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್ಡುಗಳು) ದ್ವಿ ಪ್ರತಿಯಲ್ಲಿ ಶೀಲ್ ಬಂದ್ ಮಾಡಿದ ಟೆಂಡರ್‌ಗಳನ್ನು ನೀಡಿರುವ ಶರತ್ತುಗಳನ್ನು ಪಾಲಿಸಿ ಪೌರಾಯುಕ್ತರು, ನಗರಸಭೆ, ಕಾರವಾರ ಅಥವಾ ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ಧಿ ಕೋಶ, ಉ.ಕ ಜಿಲ್ಲೆ, ಕಾರವಾರ, ಇವರಲ್ಲಿ ಸಲ್ಲಿಸುವಂತೆ ಈ ಮೂಲಕ ಕೋರಲಾಗಿದೆ.

## ಶರತ್ತುಗಳು

1 ಮೇಲಿನ ಎಲ್ಲಾ ಪ್ಯಾಕೇಜುಗಳಿಗೆ ಪ್ರತ್ಯೇಕ ಖಾಲಿ ಟೆಂಡರ ಫಾರ್ಮಗಳನ್ನು **ದಿನಾಂಕ:- 18-02-2010 ರಿಂದ ದಿನಾಂಕ:- 20-03-2010 ರ ಸಂಜೆ 5.30 ರ ವರೆಗೆ** ರಜಾ ದಿನಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ದಿನಗಳ, ಕಚೇರಿ ಸಮಯದಲ್ಲಿ, ಪೌರಾಯುಕ್ತರು, ನಗರಸಭೆ, ಕಾರವಾರ ಹಾಗೂ ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ಧಿ ಕೋಶ, ಉ.ಕ ಜಿಲ್ಲೆ, ಕಾರವಾರ, ಇವರ ಕಚೇರಿಯಲ್ಲಿ ವಿತರಿಸಲಾಗುವುದು. ಪ್ರತಿ ಟೆಂಡರ ಫಾರ್ಮಿನ ಬೆಲೆ ನಿಗದಿ ಪಡಿಸಲಾಗಿದ್ದು ಶೇ. 12.5% ವ್ಯಾಟ್ ರಂತೆ ಹೆಚ್ಚುವರಿ ತೆರಿಗೆ ಶುಲ್ಕವನ್ನು ಪಾವತಿ ಮಾಡಕತಕ್ಕದ್ದು. ಖಾಲಿ ಟೆಂಡರ ಫಾರ್ಮಗಳ ಮೊತ್ತವನ್ನು ಹಿಂದಿರುಗಿಸಲಾಗುವುದಿಲ್ಲ.

2 **ದಿನಾಂಕ:- 23-03-2010 ರಂದು ಬೆಳಗ್ಗೆ 11.00 ಗಂಟೆಗೆ,** ನಗರಸಭೆಯ ಸಭಾ ಭವನದಲ್ಲಿ ಹಾಜರಿರುವ ಬಿಡ್ಡುದಾರರ ಸಮಕ್ಷಮದಲ್ಲಿ ಸ್ವಿಕೃತವಾಗಿರುವ ಟೆಂಡರಗಳ ತಾಂತ್ರಿಕ ಬಿಡ್ಡು ಗಳನ್ನು ಮಾತ್ರ ತೆರೆಯಲಾಗುವುದು. ತಾಂತ್ರಿಕ ಬಿಡ್ಡುಗಳನ್ನು ತೆರೆದ ನಂತರ ನೀಡಿರುವ ತಾಂತ್ರಿಕ ಅರ್ಹತೆಗಳನ್ನು ಹೊಂದಿರುವ ಬಿಡ್ಡುದಾರರ ಆರ್ಥಿಕ ಬಿಡ್ಡುಗಳನ್ನು ಸದರಿ ಗುತ್ತಿಗೆದಾರರಿಗೆ ನಗರಸಭೆಯಿಂದ ತಿಳಿಸಿ ತೆರೆಯಲಾಗುವುದು.

3 ಹೆಚ್ಚಿನ ವಿವರಗಳಿಗಾಗಿ ನಗರಸಭೆಯಲ್ಲಿ ವಿಚಾರಿಸಬಹುದು ಅಥವಾ ನಗರಸಭೆಯ ಅಂತರಜಾಲ www.karwarcity.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ ಇದೆ<br>**ಪೌರಾಯುಕ್ತರು**<br>**ನಗರಸಭೆ ಕಾರವಾರ**

ಸಹಿ ಇದೆ .<br>**ಅಧ್ಯಕ್ಷರು**<br>**ನಗರಸಭೆ ಕಾರವಾರ**

# ನಗರಸಭಾ ಕಾರ್ಯಾಲಯ, ಕಾರವಾರ

ನಂ:ನಸಕಾ/ಕಾವಿ/CMSMTDP/ಟೆಂಡರು 1016/2009-10 ದಿನಾಂಕ:-17-02-2010

## ಟೆಂಡರ ಪ್ರಕಟಣೆ(ಎರಡು ಲಕೋಟೆ ಪದ್ದತಿ)

ಮಾನ್ಯ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಕಾರವಾರ ನಗರಸಭೆಗೆ ಬಿಡುಗಡೆಯಾಗಲಿರುವ ಅನುದಾನದಲ್ಲಿ ಈ ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸುವ ಕುರಿತು ನಗರಸಭೆಯಲ್ಲಿ ಪ್ರಸ್ತುತ ಸಾಲಿಗೆ ನೋಂದಾಯಿಸಿದ ಒಂದನೇ ದರ್ಜೆ ಸಿವಿಲ್ ಗುತ್ತಿಗೆದಾರರಿಂದ ಐಟಂರೇಟ ಟೆಂಡರುಗಳನ್ನು **KW-3 (TWO COVER SYSTEM)** ಮಾದರಿ ಟೆಂಡರು ದಾಖಲೆಗಳ ಶರತ್ತಿಗೆ ಒಳಪಟ್ಟು ಕರೆಯಲಾಗಿದೆ. ಆಸಕ್ತ ಗುತ್ತಿಗೆದಾರರು ದಿನಾಂಕ: 22-03-2010 ರಂದು ಸಾಯಂಕಾಲ 4.30 ಗಂಟೆಯ ಒಳಗೆ ಎರಡು ಲಕೋಟೆ ಪದ್ದತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್ಡುಗಳು) ದ್ವಿ ಪ್ರತಿಯಲ್ಲಿ ಶೀಲ್ ಬಂದ್ ಮಾಡಿದ ಟೆಂಡರ್‌ಗಳನ್ನು ನೀಡಿರುವ ಶರತ್ತುಗಳನ್ನು ಪಾಲಿಸಿ ಪೌರಾಯುಕ್ತರು, ನಗರಸಭೆ, ಕಾರವಾರ ಅಥವಾ ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ಧಿ ಕೋಶ, ಉ.ಕ ಜಿಲ್ಲೆ, ಕಾರವಾರ, ಇವರಲ್ಲಿ ಸಲ್ಲಿಸುವಂತೆ ಈ ಮೂಲಕ ಕೋರಲಾಗಿದೆ.

**ಕಾಮಗಾರಿಯ ವಿವರಗಳು**

| ಕ್ರ. ಸಂ | ಪ್ಯಾಕೇಜು ವಿವರಗಳು | | | ಒಟ್ಟು ಪ್ಯಾಕೇಜು ಮೊತ್ತ ರೂ ಲಕ್ಷಗಳಲ್ಲಿ | ಮುಂಗಡ ಠೇವಣಿ ಮೊತ್ತ (ರೂ ಗಳಲ್ಲಿ) | ಕೆಲಸದ ಅವದಿ (ಮಳೆಗಾಲ ಹೊರತು ಪಡಿಸಿ) | ಟೆಂಡರು ಫಾರಂ ಶುಲ್ಕ (ರೂ ಗಳಲ್ಲಿ) |
|---|---|---|---|---|---|---|---|
| | ಕ. ಸಂ. | ಕಾಮಗಾರಿಯ ವಿವರಗಳು | ಅಂದಾಜು ಮೊತ್ತ ರೂ ಲಕ್ಷಗಳಲ್ಲಿ | | | | |
| 1 | | **ಪ್ಯಾಕೇಜು 52** | | 100.00 | 1,00,000.00 | 4 ತಿಂಗಳು | 5000.00 + ಶೇ. 12.5% ವ್ಯಾಟ್ |
| | 1 | ಶಿರವಾಡದಲ್ಲಿ ಹೆಚ್ಚುವರಿ ಎಸ್.ಡಬ್ಲ್ಯು.ಎಂ. ಸೈಟಿನಲ್ಲಿ ಆರ.ಸಿ.ಸಿ. ಡ್ರೈನ್ ಮತ್ತು ಕಾಂಪೋಸ್ಟ್ ಯಾರ್ಡ ನಿರ್ಮಾಣ ಕಾಮಗಾರಿ (ಅಟಚೆಡ್ ಹರಿಯುವ ಚರಂಡಿ ಮತ್ತು ವಿಂಡ್ರೋ ಯಾರ್ಡ ಹಾಗೂ ಯಾರ್ಡಗೆ ಶೆಡ್ ನಿರ್ಮಿಣ) | 100.00 | | | | |
| 2 | | **ಪ್ಯಾಕೇಜು 53** | | 65.00 | 65,000.00 | 2 ತಿಂಗಳು | 5000.00 + ಶೇ. 12.5% ವ್ಯಾಟ್ |
| | 1 | ಕಾಜುಬಾಗ ಸುಂಕೇರಿ ಮುಖ್ಯ ರಸ್ತೆಯಿಂದ ಮಹಾದೇವ ದೇವಸ್ತಾನವರೆಗೆ ಚರಂಡಿ ನಿರ್ಮಾಣ ಮತ್ತು ಶೋಲ್ಡರ ಸುಧಾರಣೆ | 65.00 | | | | |
| 3 | | **ಪ್ಯಾಕೇಜು 54** | | 100.00 | 1,00,000.00 | 3 ತಿಂಗಳು | 5000.00 + ಶೇ. 12.5% ವ್ಯಾಟ್ |
| | 1 | ಶಿರವಾಡದಲ್ಲಿ ಹೆಚ್ಚುವರಿ ಎಸ್.ಡಬ್ಲ್ಯು.ಎಂ. ಸೈಟಿನಲ್ಲಿ ಆರ.ಸಿ.ಸಿ. ಡ್ರೈನ್ ಮತ್ತು ಕಾಂಪೋಸ್ಟ್ ಯಾರ್ಡ ನಿರ್ಮಾಣ ಕಾಮಗಾರಿ ( ಹಳೇ ಸೈಟಿನಲ್ಲಿ ಬಂಡ್, ಡ್ರೈನ್ ಹಾಗೂ ಸರ್ವಿಸ್ ರಸ್ತೆ ನಿರ್ಮಾಣ) | 100.00 | | | | |

**ತಾಂತ್ರಿಕ ಅರ್ಹತೆಗಳು (ಕವರ್ 1 ರಲ್ಲಿ ಸಲ್ಲಿಸಬೇಕಾಗಿರುವ ಅವಶ್ಯ ದಾಖಲಾತಿಗಳು)**

1) ಗುತ್ತಿಗೆದಾರರು ಟೆಂಡರು ದಾಖಲಾತಿಗಳೊಂದಿಗೆ ತಮ್ಮ ಮೂಲ ಪಿ.ಡಬ್ಲ್ಯ್.ಡಿ. ನೋಂದಣಿ ಪಾಸ ಪುಸ್ತಕದ ನಕಲು, ನಗರಸಭೆಯಲ್ಲಿ 2009-10ನೇ ಸಾಲಿನಲ್ಲಿ ನೋಂದಾಯಿತ ನಕಲು ಪ್ರತಿಯವನ್ನು ಕಡ್ಡಾಯವಾಗಿ ಸಲ್ಲಿಸುವುದು
2) ಗುತ್ತಿಗೆದಾರರು ಸಲ್ಲಿಸುವ ಪ್ಯಾಕೇಜು ನೇದರ ಪ್ಯಾಕೇಜು ಮೊತ್ತದ ಶೇ 50.0% ರಷ್ಟು ಅದೇ ರೀತಿಯ ಕಾಮಗಾರಿಯನ್ನು ಯಾವುದಾದರೂ ಸರ್ಕಾರಿ ಇಲಾಖೆಯಲ್ಲಿ ಮಾತ್ರ ಕಳೆದ ಮೂರು ವರ್ಷದಲ್ಲಿ ನಿರ್ವಹಿಸಿರಬೇಕಾಗಿದ್ದು ಈ ಬಗ್ಗೆ ಧೃಡಿಕೃತ ಪ್ರಮಾಣ ಪತ್ರವನ್ನು ನೀಡುವುದು
3) ಗುತ್ತಿಗೆದಾರರು ಸಲ್ಲಿಸುವ ಪ್ಯಾಕೇಜು ನೇದರ ಪ್ಯಾಕೇಜು ಮೊತ್ತದ ಶೇ 100.0% ರಷ್ಟು ವಾರ್ಷಿಕ ವ್ಯವಾಹರದ ಮೊತ್ತವನ್ನು ಕಳೆದ ಮೂರು ವರ್ಷದ ಯಾವುದಾದರೂ ಒಂದು ವರ್ಷದಲ್ಲಿ ಹೊಂದಿದ್ದು, ಈ ಬಗ್ಗೆ ಸಿ.ಎ. ದಿಂದ ಅನುಮೋದಿತ ಲೆಕ್ಕ ಪತ್ರದ ಪರಿಶೋಧನಾ ವರದಿಯನ್ನು ನೀಡುವುದು
4) ಗುತ್ತಿಗೆದಾರರು ಸಲ್ಲಿಸುವ ಪ್ಯಾಕೇಜು ನೇದರ ಕಾಮಗಾರಿಗಳ ಅನುಗುಣವಾಗಿ ಈ ಕಳಗಿನ ಸ್ಥಾವರ ಮತ್ತು ಯಂತ್ರಗಳ ಶೇ 50.0% ರಷ್ಟು ಸ್ವಂತವಾಗಿ ಹೊಂದಿರಬೇಕಾಗಿದ್ದು, ಈ ಬಗ್ಗೆ ಸ್ಥಾವರ ಮತ್ತು ಯಂತ್ರಗಳನ್ನು ಖರೀದಿ ಮಾಡಿಕೊಂಡು ಹೊಂದಿರುವ ಬಗ್ಗೆ ವಿವರ ಅಥವಾ ಉಳಿದ ಶೇ 50.0% ರಷ್ಟು ನೇದಕ್ಕೆ ಬಾಡಿಗೆ ಆಧಾರದಲ್ಲಿ ಪಡೆದುಕೊಂಡ ಬಗ್ಗೆ ಕರಾರನ್ನು ಒಂದು ವರ್ಷ ಕಾಲಾವಧಿಗೆ ಸಿಂಧುತ್ವ ಇರುವಂತೆ ನೋಟರಿಯಿಂದ ಅನುಮೋದಿತ ದಾಖಲೆಗಳನ್ನು ನೀಡುವುದು. ಬಾಡಿಗೆ ಆಧಾರದಲ್ಲಿ ಪಡೆದ ಸಂಧರ್ಭದಲ್ಲಿ ಕೇವಲ ಒಂದು ಬಾಡಿಗೆದಾರರಿಂದ ಪಡೆಯುವುದು ಮತ್ತು ಸದರಿ ಬಾಡಿಗೆದಾರರು ಮತ್ತೊಂದು ಗುತ್ತಿಗೆದಾರರಿಗೆ ಬಾಡಿಗೆ ಆಧಾರದ ಪ್ರಮಾಣ ಪತ್ರವನ್ನು ನೀಡಬಾರದು. ಒಂದೇ ಬಾಡಿಗೆದಾರರಿಂದ ಎರಡು ಅಥವ ಹೆಚ್ಚು ಮಂದಿ ಗುತ್ತಿದೆದಾರರಿಗೆ ಬಾಡಿಗೆ ಪ್ರಮಾಣ ಪತ್ರ ಪಡೆದ ಎಲ್ಲಾ ಗುತ್ತಿಗೆದಾರರ ಟೆಂಡರನ್ನು ತಿರಸ್ಕರಿಸಲಾಗುವುದು.
5) ಗುತ್ತಿಗೆದಾರರು ಅದಾಯ ತೆರಿಗೆ ಹಾಗೂ ವ್ಯಾಟ್ ಪ್ರಮಾಣ ಪತ್ರದ ಪ್ರತಿಯನ್ನು ಧೃಡಿಕರಿಸಿ ಸಲ್ಲಿಸುವುದು
6) ಕಾಮಗಾರಿಯ ಸ್ಥಳದಲ್ಲಿ ಗುತ್ತಿಗೆದಾರರ ವತಿಯಿಂದ ಬಿ.ಇ. (ಸಿವಿಲ್) ವಿದ್ಯಾರ್ಹತೆಯ ವ್ಯಕ್ತಿಯನ್ನು ಕಾಮಗಾರಿಯ ವೇಳೆ ಮೇಲುಸ್ತುವಾರಿ ನೋಡಿಕೊಳ್ಳಲು ನಿಯೋಜಿಸಬೇಕಾಗಿದ್ದು ಈ ಬಗ್ಗೆ ಮೇಲುಸ್ತುವಾರಿ ನೋಡಿಕೊಳ್ಳವ ಬಿ.ಇ. (ಸಿವಿಲ್) ವಿದ್ಯಾರ್ಹತೆಯ ವ್ಯಕ್ತಿಯ ವಿವರವನ್ನು ನೀಡುವುದು

**ಸ್ಥಾವರಗಳ ವಿವರ:**

| ಪ್ಯಾಕೇಜು ನಂ. 52 | ಪ್ಯಾಕೇಜು ನಂ. 53 | ಪ್ಯಾಕೇಜು ನಂ. 54 |
|---|---|---|
| 1) ಪವರ್ ಮಿಕ್ಸರ್ ಪ್ಲ್ಯಾಂಟ್ ಕನಿಷ್ಠ 1 ಸಂಖ್ಯೆ | 1) ಪವರ್ ಮಿಕ್ಸರ್ ಪ್ಲ್ಯಾಂಟ್ ಕನಿಷ್ಠ 1 ಸಂಖ್ಯೆ | 1) ಪ್ರೋಕ್ಲೇನ್ 200/100 ಸಾಮರ್ಥ್ಯ ಕನಿಷ್ಠ 1 ಸಂಖ್ಯೆ |
| 2) ಪಿನ್ / ನೀಡಲ್ ವೈಬ್ರೇಟರ್ ಕನಿಷ್ಠ 1 ಸಂಖ್ಯೆ | 2) ಪಿನ್ / ನೀಡಲ್ ವೈಬ್ರೇಟ್ಟರ್ ಕನಿಷ್ಠ 1 ಸಂಖ್ಯೆ | 2) ಮೆಕ್ಯಾನಿಕಲ್/ ಹೈಡ್ರೋಲಿಕ್ ಪೇವರ್ ಫಿನಿಶರ್ ಕನಿಷ್ಠ 1 ಸಂಖ್ಯೆ |
| 3) ಸರ್ಫೇಸ್ ವೈಬ್ರೇಟರ್ ಕನಿಷ್ಠ 1 ಸಂಖ್ಯೆ | 3) ಸರ್ಫೇಸ್ ವೈಬ್ರೇಟರ್ ಕನಿಷ್ಠ 1 ಸಂಖ್ಯೆ | 3) ವೈಬ್ರೇಟರ್ ರೋಲರ್ ಕನಿಷ್ಠ 1 ಸಂಖ್ಯೆ |
| 4) ಪ್ರೋಕ್ಲೇನ್ 200/100 ಸಾಮರ್ಥ್ಯ ಕನಿಷ್ಠ 1 ಸಂಖ್ಯೆ | 4) ಜೆ.ಸಿ.ಬಿ. 70 ಯಂತ್ರ ಕನಿಷ್ಠ 1 ಸಂಖ್ಯೆ | 4) ಪವರ್ ಮಿಕ್ಸರ್ ಪ್ಲ್ಯಾಂಟ್ ಕನಿಷ್ಠ 1 ಸಂಖ್ಯೆ |
| 5) ಜೆ.ಸಿ.ಬಿ. 70 ಯಂತ್ರ ಕನಿಷ್ಠ 1 ಸಂಖ್ಯೆ | 5) ಟಿಪ್ಪರ್ ಕನಿಷ್ಠ 4 ಸಂಖ್ಯೆ | 5) ಪಿನ್ / ನೀಡಲ್ ವೈಬ್ರೇಟರ್ ಕನಿಷ್ಠ 1 ಸಂಖ್ಯೆ |
| 6) ಟಿಪ್ಪರ್ ಕನಿಷ್ಠ 4 ಸಂಖ್ಯೆ | 6) ಸೆಂಟರಿಂಗ್ ಪ್ಲೇಟ್ (ಅಳತೆ 3' x 2') ಕನಿಷ್ಠ 500 ಸಂಖ್ಯೆ | 6) ಸರ್ಫೇಸ್ ವೈಬ್ರೇಟರ್ ಕನಿಷ್ಠ 1 ಸಂಖ್ಯೆ |
| 7) ಸೆಂಟರಿಂಗ್ ಪ್ಲೇಟ್ (ಅಳತೆ 3' x 2') ಕನಿಷ್ಠ 500 ಸಂಖ್ಯೆ | -- | 7) ಜೆ.ಸಿ.ಬಿ. 70 ಯಂತ್ರ ಕನಿಷ್ಠ 1 ಸಂಖ್ಯೆ |
| 8) ವೈಬ್ರೇಟರ್ ರೋಲರ್ ಕನಿಷ್ಠ 1 ಸಂಖ್ಯೆ | -- | 8) ಟಿಪ್ಪರ್ ಕನಿಷ್ಠ 4 ಸಂಖ್ಯೆ |
| -- | -- | 9) ಸೆಂಟರಿಂಗ್ ಪ್ಲೇಟ್ (ಅಳತೆ 3' x 2') ಕನಿಷ್ಠ 100 ಸಂಖ್ಯೆ |

# <u>ಶರತ್ತುಗಳು</u>

1 ಮೇಲಿನ ಎಲ್ಲಾ ಪ್ಯಾಕೇಜುಗಳಿಗೆ ಪ್ರತ್ಯೇಕ ಖಾಲಿ ಟೆಂಡರ ಫಾರ್ಮಗಳನ್ನು **ದಿನಾಂಕ:- 18-02-2010 ರಿಂದ ದಿನಾಂಕ:- 20-03-2010 ರ ಸಂಜೆ 5.30 ರ ವರೆಗೆ** ರಜಾ ದಿನಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ದಿನಗಳ, ಕಚೇರಿ ಸಮಯದಲ್ಲಿ, ಪೌರಾಯುಕ್ತರು, ನಗರಸಭೆ, ಕಾರವಾರ ಹಾಗೂ ಯೋಜನಾ ನಿರ್ದೇಶಕರು, ಜಿಲ್ಲಾನಗರಾಭಿವೃದ್ಧಿ ಕೋಶ, ಉ.ಕ ಜಿಲ್ಲೆ, ಕಾರವಾರ, ಇವರ ಕಚೇರಿಯಲ್ಲಿ ವಿತರಿಸಲಾಗುವುದು. ಪ್ರತಿ ಟೆಂಡರ ಫಾರ್ಮಿನ ಬೆಲೆ ನಿಗದಿ ಪಡಿಸಲಾಗಿದ್ದು ಶೇ. 12.5% ವ್ಯಾಟ್ ರಂತೆ ಹೆಚ್ಚುವರಿ ತೆರಿಗೆ ಶುಲ್ಕವನ್ನು ಪಾವತಿ ಮಾಡಕತಕ್ಕದ್ದು. ಖಾಲಿ ಟೆಂಡರ ಫಾರ್ಮಗಳ ಮೊತ್ತವನ್ನು ಹಿಂದಿರುಗಿಸಲಾಗುವುದಿಲ್ಲ.

2 ನಿಗದಿ ಪಡಿಸಿರುವ ಮುಂಗಡ ಠೇವಣಿ ಮೊತ್ತವನ್ನು ಕಡ್ಡಾಯವಾಗಿ ಡಿ.ಡಿ. ಮುಖಾಂತರವೇ **"ಪೌರಾಯುಕ್ತರು, ನಗರಸಭೆ ಕಾರವಾರ"** ರವರ ಹೆಸರಿಗೆ ಕಾರವಾರದಲ್ಲಿ ಪಾವತಿಯಾಗುವಂತೆ ತೆಗೆದು ಟೆಂಡರ ಜೊತೆ ಸಲ್ಲಿಸತಕ್ಕದ್ದು. ಮುಂಗಡ ಠೇವಣಿಯನ್ನು ತುಂಬದೇ ಇದ್ದ ಟೆಂಡರಗಳನ್ನು ತಿರಸ್ಕರಿಸಲಾಗುವುದು.

3 ಎಲ್ಲಾ ಪ್ಯಾಕೇಜಗಳಿಗೆ ಬಿಡ್ಡುದಾರರು ನೀಡಿರುವ ದರಗಳು ಒಂದು ವರ್ಷದ ಕಾಲಾವಧಿಗೆ ಸಿಂಧುತ್ವ ಇರುತ್ತದೆ.

4 ಗುತ್ತಿಗೆದಾರರು ಯಾವುದೇ ಶರತ್ತುಗಳನ್ನೊಳಗೊಂಡು ಸಲ್ಲಿಸಲಾಗುವ ಟೆಂಡರಗಳನ್ನು ತಿರಸ್ಕರಿಸಲಾಗುವುದು.

5 ಟೆಂಡರ ಜೊತೆಗೆ ಲಗತ್ತಿಸಿದ ಎಲ್ಲಾ ಪ್ರಮಾಣ ಪತ್ರಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ಮುದ್ರೆಯೊಂದಿಗೆ ಧೃಢೀಕರಿಸಿ ತಾಂತ್ರಿಕ ಲಕೋಟೆಯಲ್ಲಿ ಮೇಲೆ ತಿಳಿಸಿರುವಂತೆ ಎಲ್ಲಾ ದಾಖಲಾತಿಗಳನ್ನು ದ್ವಿ ಪ್ರತಿಯಲ್ಲಿ ಮತ್ತು ನೀಡಿರುವ ಆರ್ಥಿಕ ಬಿಡ್ಡನ್ನು (ಬಿ. ಒ. ಕ್ಯು) ನೇದರಲ್ಲಿ ತಮ್ಮ ದರಗಳನ್ನು ತುಂಬಿಕೊಂಡು ದ್ವಿ ಪ್ರತಿಯಲ್ಲಿ ತಯಾರಿಸುವುದು. ಅಂತಿಮವಾಗಿ ತಾಂತ್ರಿಕ ಮತ್ತು ಆರ್ಥಿಕ ಲಕೋಟೆಗಳನ್ನು ಒಟ್ಟು ಸೇರಿಸಿಕೊಂಡು ಒಂದು ಲಕೋಟೆಯಲ್ಲಿ ಸೀಲ್ ಬಂದ್ ಮಾಡಿ, ಪ್ಯಾಕೇಜು ಸಂಖ್ಯೆ ಮತ್ತು ಕಾಮಗಾರಿಯ ಹೆಸರು ಮತ್ತು ಪ್ಯಾಕೇಜು ಮೊತ್ತವನ್ನು ಬಿಡಿ ಅಕ್ಷರಗಳಲ್ಲಿ ಬರೆದು ಸಲ್ಲಿಸತಕ್ಕದ್ದು.

6 ಗುತ್ತಿಗೆದಾರರು ಸ್ವತಃ ಕಾಮಗಾರಿ ಸ್ಥಳ ಪರಿಶೀಲಿಸಿದ ನಂತರವೇ ಟೆಂಡರ ಸಲ್ಲಿಸತಕ್ಕದ್ದು.

7 ದಿನಾಂಕ:- **23-03-2010 ರಂದು ಬೆಳಿಗ್ಗೆ 11.00 ಗಂಟೆಗೆ**, ನಗರಸಭೆಯ ಸಭಾ ಭವನದಲ್ಲಿ ಹಾಜರಿರುವ ಬಿಡ್ಡುದಾರರ ಸಮಕ್ಷಮದಲ್ಲಿ ಸ್ವಿಕೃತವಾಗಿರುವ ಟೆಂಡರಗಳ ತಾಂತ್ರಿಕ ಬಿಡ್ಡು ಗಳನ್ನು ಮಾತ್ರ ತೆರೆಯಲಾಗುವುದು. ತಾಂತ್ರಿಕ ಬಿಡ್ಡುಗಳನ್ನು ತೆರೆದ ನಂತರ ನೀಡಿರುವ ತಾಂತ್ರಿಕ ಅರ್ಹತೆಗಳನ್ನು ಹೊಂದಿರುವ ಬಿಡ್ಡುದಾರರ ಆರ್ಥಿಕ ಬಿಡ್ಡುಗಳನ್ನು ಸದರಿ ಗುತ್ತಿಗೆದಾರರಿಗೆ ನಗರಸಭೆಯಿಂದ ತಿಳಿಸಿ ತೆರೆಯಲಾಗುವುದು.

8 ಅಂತಿಮವಾಗಿ ಆಯ್ಕೆಯಾದ ಗುತ್ತಿಗೆದಾರರಿಗೆ, ಕಾಲಕಾಲಕ್ಕೆ ಅನುದಾನ ಬಿಡುಗಡೆಯಾದಂತೆ ಕಾರ್ಯಾದೇಶವನ್ನು ನೀಡಲಾಗುವುದು.

9 ಅಂತಿಮವಾಗಿ ಆಯ್ಕೆಯಾದ ಗುತ್ತಿಗೆದಾರರಿಗೆ ನೀಡುವ ಸೂಚನಾ ಪತ್ರದಂತೆ, ಕಾಮಗಾರಿಯ ಶೇ 5.00% ರಷ್ಟನ್ನು ನಗರಸಭೆಗೆ ಡಿ.ಡಿ. ಅಥವಾ ಬ್ಯಾಂಕ ಗ್ಯಾರಂಟಿ ಮೂಲಕ 20 ದಿನದ ಕಾಲಾವಕಾಶದಲ್ಲಿ ಮಂದಿನ ನಿರ್ವಾಹಣೆ ಅವಧಿ (2 ವರ್ಷ ಕಾಲ) ವರೆಗೆ ಸಿಂಧು ಇರುವಂತೆ ಭರಣ ಮಾಡುವುದು, ತದನಂತರ ಗುತ್ತಿಗೆದಾರರಿಗೆ ಕಾರ್ಯದೇಶವನ್ನು ನೀಡಲಾಗುವುದು. ಈ ರೀತಿಯಾಗಿ ನಿಯಮ ಪಾಲಿಸದ ಗುತ್ತಿಗೆದಾರರ ಟೆಂಡರನ್ನು ರದ್ದು ಪಡಿಸಿ, ಸದರಿಯವರ ಇ.ಎಂ.ಡಿ.ಯನ್ನು ಮುಟ್ಟುಗೋಲು ಮಾಡಿಕೊಂಡು 2 ನೇ ಕಡಿಮೆ ದರ ಇದ್ದ ಗುತ್ತಿಗೆದಾರರಿಂದ ಕೆಲಸ ಮಾಡಿಸಲು ಕ್ರಮ ಜರುಗಿಸಲಾಗುವುದು.

10 ಕಾಮಗಾರಿ ನಡೆಯುವ ಸ್ಥಳದಲ್ಲಿ ಕಾಮಗಾರಿಯ ಪೂರ್ಣ ಮಾಹಿತಿಯುಳ್ಳ ಸೂಚನಾ ಫಲಕವನ್ನು ಅಳವಡಿಸತಕ್ಕದ್ದು ಮತ್ತು ಕಾಮಗಾರಿಯ ಸ್ಥಳದಲ್ಲಿ ಗುತ್ತಿಗೆದಾರರ ವತಿಯಿಂದ ಬಿ.ಇ ವಿದ್ಯಾರ್ಹತೆಯ ವ್ಯಕ್ತಿಯನ್ನು ಕಾಮಗಾರಿಯ ವೇಳೆ ಮೇಲುಸ್ತುವಾರಿ ನೋಡಿಕೊಳ್ಳಲು ನಿಯೋಜಿಸುವುದು.

11 ಕಾಮಗಾರಿಗಳಿಗೆ ಉಪಯೋಗಿಸುವ ಸಾಮಗ್ರಿಗಳನ್ನು ಉಪಯೋಗಿಸುವ ಪೂರ್ವ ಮೂರನೇ ಪಾರ್ಟಿ ಮತ್ತು ನಗರಸಭೆಯ ಇಂಜಿನಿಯರ ಸಮ್ಮುಖದಲ್ಲಿ ಮಾದರಿ ಸಂಗ್ರಹಿಸಿ ಪರೀಕ್ಷಿಸಿ ಅವುಗಳು ಉತ್ತಮ ಗುಣಮಟ್ಟ ಹೊಂದಿರುವ ಕುರಿತು ದೃಢೀಕರಣ ಪ್ರಮಾಣ ಪತ್ರವನ್ನು ಸ್ವಂತ ಖರ್ಚಿನಿಂದ ಸಲ್ಲಿಸತಕ್ಕದ್ದು. ನಂತರವೇ ಕಾಮಗಾರಿಗೆ ಬೇಕಾಗುವ ಸಾಮಾಗ್ರಿಗಳನ್ನು ಉಪಯೋಗಿಸತಕ್ಕದ್ದು.

12 ಗುತ್ತಿಗೆದಾರರಿಗೆ ವಹಿಸಿಕೊಡಲಾಗಿರುವ ಕಾಮಗಾರಿಗಳನ್ನಾಗಲಿ ಅಥವಾ ಕಾಮಗಾರಿಯ ಯಾವುದೇ ಭಾಗದ ನಿರ್ವಹಣೆಯನ್ನು ಯಾವುದೇ ಉಪಗುತ್ತಿಗೆ ಆಧಾರದ ಮೇಲೆ ವಹಿಸಿಕೊಡುವುದನ್ನು ನಿಷೇಧಿಸಲಾಗಿದೆ.

13 ಕಾಮಗಾರಿಗಳ ಮೂರು ಹಂತದ ಛಾಯಾ ಚಿತ್ರವನ್ನು ಕಡ್ಡಾಯವಾಗಿತೆಗೆಯತಕ್ಕದ್ದು [ಕಾಮಗಾರಿಯ ಪೂರ್ವದಲ್ಲಿ ಪ್ರಗತಿಯಲ್ಲಿದ್ದಾಗ ಹಾಗೂ ಕಾಮಗಾರಿ ಪೂರ್ಣಗೊಂಡ ನಂತರ]

14 ಟೆಂಡರಿನಲ್ಲಿ ಇಟ್ಟ ಅವಧಿಯು ಮಳೆಗಾಲವನ್ನು ಹೊರತು ಪಡಿಸಿದ್ದು, ಗುತ್ತಿಗೆದಾರರು ಟೆಂಡರಿನಲ್ಲಿ ಇಟ್ಟ ಅವಧಿಯಲ್ಲಿ ಕಾಮಗಾರಿ ಪೂರ್ತಿಗೊಳಸದೇ ಇದ್ದಲ್ಲಿ ತಮಗೆ ಯಾವುದೇ ನೋಟಿಸನ್ನು ನೀಡದೇ ತಮ್ಮ ಟೆಂಡರ ರದ್ದು ಗೊಳಿಸಿ 2 ನೇ ಕಡಿಮೆ ದರ ಇದ್ದ ಗುತ್ತಿಗೆದಾರರಿಂದ ಕೆಲಸ ಮಾಡಿಸಲು ಕ್ರಮ ಜರುಗಿಸಲಾಗುವುದು. ಹಾಗೂ ಹೆಚ್ಚಿಗೆ ಬೀಳುವ ಮೊತ್ತವನ್ನು ತಮ್ಮಿಂದ ವಸೂಲಿ ಮಾಡಲಾಗುವುದು.

15 ಪೂರ್ಣಗೊಂಡ ಕಾಮಗಾರಿಯ ಅಂತಿಮ ಬಿಲ್ಲ ಪಾವತಿಯಾದ ದಿನಾಂಕದಿಂದ ಮುಂದುವರೆಯುವಂತೆ ಕಾಮಗಾರಿಯ ನಿರ್ವಹಣೆಯನ್ನು 2 ವರ್ಷದ ಅವಧಿಗೆ ಗುತ್ತಿಗೆದಾರರೇ ಯಾವುದೇ ಹೆಚ್ಚಿನ ವೆಚ್ಚವಿಲ್ಲದೆ ಸ್ವಂತ ಖರ್ಚಿನಲ್ಲಿ ನಿರ್ವಹಿಸತಕ್ಕದ್ದು..

16 ಯಾವುದೇ ಕಾರಣ ನೀಡದೇ ಟೆಂಡರ ರದ್ದು ಪಡಿಸುವ ಅಧಿಕಾರ ಈ ಕೆಳಗೆ ಸಹಿ ಮಾಡಿದವರ ಅಧಿಕಾರವಾಗಿರುತ್ತದೆ.ಅದನ್ನು ಪ್ರಶ್ನಿಸುವ ಅಧಿಕಾರ ಯಾರಿಗೂ ಇರುವುದಿಲ್ಲ.

17 ಕಾಮಗಾರಿ ಸ್ಥಳದಲ್ಲಿ ಸಾರ್ವಜನಿಕರ ಹಾಗೂ ಕಾಮಗಾರಿ ಸಿಬ್ಬಂದಿಗಳ ಸುರಕ್ಷತೆ ಹಾಗೂ ಭದ್ರತೆ ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ.

18 ಮೂರನೇ ಪಾರ್ಟಯವರಿಂದ ಕಾಮಗಾರಿ ಗುಣಮಟ್ಟ ತಪಾಸಣೆ ಆದ ನಂತರವೇ ಗುತ್ತಿಗೆದಾರರಿಗೆ ಬಿಲ್ಲು ಪಾವತಿಸಲಾಗುವುದು.

19 ಕಾಮಗಾರಿ ಸ್ಥಳದಲ್ಲಿ ನಗರಸಭೆಯ ಇಂಜಿನಿಯರ, ಮೂರನೇ ಪಾರ್ಟ ಇಂಜಿನಿಯರ ಹಾಗೂ ಮೇಲಾಧಿಕಾರಿಗಳು ನೀಡುವ ಸಲಹೆ ಸೂಚನೆಗಳನ್ನು ಪಾಲಿಸತಕ್ಕದ್ದು.

20 ಟೆಂಡರ ಪ್ರಕಟಣೆಯಲ್ಲಿ ನೀಡಿದ ದಿನದಂದು ಯಾವುದೇ ಸರಕಾರಿ ರಜೆ ಇದ್ದಲ್ಲಿ ರಜೆಯ ನಂತರದ ದಿನವೆಂದು ಪರಿಗಣಿಸಲಾಗುವುದು.

21 ಹೆಚ್ಚಿನ ವಿವರಗಳಿಗಾಗಿ ನಗರಸಭೆಯಲ್ಲಿ ವಿಚಾರಿಸಬಹುದು ಅಥವಾ ನಗರಸಭೆಯ ಅಂತರಜಾಲ www.karwarcity.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ ಇದೆ
**ಪೌರಾಯುಕ್ತರು**
**ನಗರಸಭೆ ಕಾರವಾರ**

ಸಹಿ ಇದೆ .
**ಅಧ್ಯಕ್ಷರು**
**ನಗರಸಭೆ ಕಾರವಾರ**